# ಹೊಸತು

## ವಿಟ್ರಾ ಫಿಟ್ಟಿಂಗ್ಸ್

ಸ್ನಾನಗೃಹದ ಮೆರುಗನ್ನು ಹೆಚ್ಚಿಸಲು ಬಯಸುವವರಿಗೆ ವಿಟ್ರಾ ನೂತನ ಮಾದರಿಯ ಫಿಟ್ಟಿಂಗ್ಸ್ ಅನ್ನು ಹೊರತಂದಿದೆ. ಸಂಪೂರ್ಣ ಸರಣಿಯ ಇದು, ಆಕರ್ಷಕ ವಿನ್ಯಾಸ ಹೊಂದಿದೆ. ಸುಲಭವಾಗಿ ಬಳಸಲು ಸಾಧ್ಯವಾಗುವಂತೆ ಇದನ್ನು ರೂಪಿಸಲಾಗಿದೆ ಎಂದು ಕಂಪೆನಿ ಹೇಳಿದೆ.

ಒಳಾಂಗಣ ವಿನ್ಯಾಸಕ್ಕೆ ಸೂಕ್ತವಾದ ಬಣ್ಣಗಳ ಆಯ್ಕೆಗಳಿವೆ.

ಮಾಹಿತಿಗೆ: 09820224440





## ವಾನ್ ಹ್ಯುಸೆನ್ ಮೈಫಿಟ್

ಸ್ಟೈಲಿಶ್ ಫಾರ್ಮಲ್ ಉಡುಪುಗಳಿಗೆ ಪ್ರಸಿದ್ಧವಾದ ವ್ಯಾನ್ ಹುಸೆ ಇದೀಗ ಮೈಫಿಟ್ ಸರಣಿಯ ಶರ್ಟ್‌ಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಟ್ರೆಂಡಿ ವಿನ್ಯಾಸದ ಈ ಉಡುಪುಗಳನ್ನು ಗ್ರಾಹಕರು ತಮಗೆ ಬೇಕಾದ ಆಯ್ಕೆಯ ಅಳತೆ, ಬಣ್ಣ ಮತ್ತು ವಿನ್ಯಾಸದಲ್ಲಿ ಆರ್ಡರ್ ಮಾಡಬಹುದು. ಹಾಗೆಯೇ ಶರ್ಟ್ ಬಣ್ಣಕ್ಕೊಪ್ಪುವ ಪ್ಯಾಂಟ್ ಮತ್ತು ಸೂಟ್‌ಗಳು ಕೂಡಾ ಲಭ್ಯ.

ಮಾಹಿತಿಗೆ: 9738400297 www.trendin.com

## ಸ್ಟೈಲರ್ ಕೋಬ್ರಾ ಪೆನ್

ದುಬಾರಿ ಪೆನ್ ಪ್ರಿಯರಿಗಾಗಿ ವಿಲ್ಲಿಯಂ ಪೆನ್ ಇದೀಗ ಸ್ಟೈಲರ್ ಕಿಂಗ್ ಕೋಬ್ರಾ ಹೆಸರಿನ ಪೆನ್ ಪರಿಚಯಿಸಿದೆ.

ಸೀಮಿತ ಆವೃತ್ತಿಯ ಪೆನ್ ಇದಾಗಿದ್ದು, ಆಕರ್ಷಕ ಕುಸುರಿ ಚಿತ್ರದ ವಿನ್ಯಾಸ ಹೊಂದಿದೆ. ಕಾಳಿಂಗ ಸರ್ಪ ಬಾಯಿ ತೆರೆದ ಚಿತ್ರವಿರುವ ಈ ಪೆನ್ ನಾಜೂಕಿನಿಂದ ರೂಪಿಸಿದ್ದು, ಬರೆಯುವಾಗ ವಿಶಿಷ್ಟ ಅನುಭವ ಕೊಡುತ್ತದೆ ಎಂದು ಕಂಪೆನಿ ಹೇಳಿದೆ.

ಬೆಲೆ 2,75,000 ರೂಪಾಯಿ.

ಮಾಹಿತಿಗೆ: 9972875644

www.williampenn.net



## ನಿವಿಯಾ ವೈಟನಿಂಗ್ ಡಿಯೋಡರಂಟ್




ಡಿಯೋಡರೆಂಟ್ ಇಷ್ಟಪಡುವ ಮಹಿಳೆಯರಿಗೆ ಇದೀಗ ನಿವಿಯಾ ಪರಿಣಾಮಕಾರಿಯಾದ ವೈಟನಿಂಗ್ ಫಾರ್ಮುಲಾ ಹೊರತಂದಿದೆ. ಡಿಯೋಡರಂಟ್ ಜೊತೆಗೆ ಮೈಕ್ರೋ ಪೌಡರ್ ಹೊಂದಿರುವ ಇದು ಎರಡು ರೀತಿಯಲ್ಲಿ ಉಪಕಾರಿ ಎಂದು ಕಂಪೆನಿ ಹೇಳಿದೆ.

ಇದನ್ನು ಬಳಸುವುದರಿಂದ ದೀರ್ಘಕಾಲ ಪರಿಮಳವನ್ನು ಸೂಸುವ ಜೊತೆಗೆ ಚರ್ಮದ ಆರೋಗ್ಯ ಕಾಪಾಡಲು ಇದು ಸಹಕಾರಿ.

150 ಎಂಎಲ್‌ನ ಬಾಟಲಿ ಬೆಲೆ 199 ರೂಪಾಯಿ.

ವಿವರಗಳಿಗೆ: www.nivea.in

## ಗುಡ್‌ನೈಟ್ ನೀಮ್

ಗೋದ್ರೆಜ್ ಕಂಪೆನಿಯು ಇದೀಗ ಗುಡ್‌ನೈಟ್ ಸರಣಿಯಲ್ಲಿ ನೀಮ್ ಕಾಯಿಲ್ ಪರಿಚಯಿಸಿದೆ. ಕಡಿಮೆ ಹೊಗೆ ಸೂಸುವ ಕಾಯಿಲ್ ಇದಾಗಿದ್ದು, ಹೆಚ್ಚು ಸಮಯ ಉರಿಯುತ್ತದೆ ಎಂದು ಕಂಪೆನಿ ಹೇಳಿದೆ.




ಬೇವಿನ ಪರಿಮಳ ಸೂಸುವ ಇದು ಸೊಳ್ಳೆಗಳನ್ನು ಓಡಿಸಲು ಹೆಚ್ಚು ಸೂಕ್ತ ಹಾಗೂ ಸುಲಭವಾಗಿ ಸಾಂಕ್ರಾಮಿಕ ರೋಗಗಳಿಂದ ಪಾರಾಗಬಹುದು.

ಕಾಯಿಲ್ ಪ್ಯಾಕ್ ಬೆಲೆ 33 ರೂಪಾಯಿ.

ಮಾಹಿತಿಗೆ: 09819120821

## ಇಂಟೆಕ್ಸ್ ಅಕ್ವಾ N7




ಜನಸಾಮಾನ್ಯರ ಕೈಗೆಟಕುವ ಸ್ಮಾರ್ಟ್‌ಫೋನ್ ತಯಾರಿಕೆಗೆ ಪ್ರಸಿದ್ಧವಾದ ಇಂಟೆಕ್ಸ್ ಮೊಬೈಲ್ಸ್ ಇದೀಗ ತನ್ನ ಅಕ್ವಾ ಸರಣಿಯಲ್ಲಿ N7 ಮಾದರಿ ಬಿಡುಗಡೆ ಮಾಡಿದೆ. 4 ಇಂಚಿನ ತೆರೆ, 512 ಎಂಬಿ ರ್‍ಯಾಮ್, 4 ಜಿಬಿ ಮೆಮೊರಿ ಇದರಲ್ಲಿದೆ. 8 ಮೆಗಾಪಿಕ್ಸೆಲ್ ಕ್ಯಾಮೆರಾ ಮತ್ತು 2 ಮೆಗಾಪಿಕ್ಸೆಲ್ ಸೆಲ್ಫಿ ಇದ್ದು, ಆ್ಯಂಡ್ರಾಯ್ಡ್ 4.4.2 ಕಿಟ್‌ಕ್ಯಾಟ್, 1400 ಎಂಎಹೆಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ.

ಬೆಲೆ 3990 ರೂಪಾಯಿ.

ವಿವರಗಳಿಗೆ: www.intexmobile.in